# ಸಾವಿನ ನೆರಳುಗಳ ನೆನೆದು ಹೆತ್ತ ಕರುಳಿನ ತಳಮಳ

ವೀರೂವಿಗೆ ದೊಡ್ಡಮ್ಮನ ಮೇಲೆ, ಅಕ್ಕಂದಿರ ಮೇಲೆ ಅಗಾಧವಾದ ಪ್ರೀತಿ. ಅದಕ್ಕೆ ಕಾರಣವೂ ಇಲ್ಲದಿಲ್ಲ. ಆ ಮನೆಗೆ ಚಿಕ್ಕವನೂ ಆಗಿದ್ದ ವೀರೂ, ತನ್ನ ಮುದ್ದು ಮುದ್ದು ಮಾತುಗಳಿಂದ ಅಕ್ಕಂದಿರನ್ನು ಸದಾ ಸೆಳೆಯುತ್ತಿದ್ದ. ಅವನು ಚಿಕ್ಕ ಮಗುವಾಗಿದ್ದಾಗಲಿಂದಲೂ ಅಮ್ಮನ ತೋಳಿಗಿಂತಲೂ ಅಕ್ಕಂದಿರ ತೋಳುಗಳಲ್ಲಿಯೇ ಹೆಚ್ಚು ಇರುತ್ತಿದ್ದದ್ದು. ಊಟ ತಿಂಡಿ ತಿನ್ನಿಸುವುದರಿಂದ ಹಿಡಿದು, ಸ್ನಾನ ಮಾಡಿಸುವ ತನಕ ವೀರೂನ ನೋಡಿಕೊಳ್ಳಲು ಮೇನಕ, ಕವಿತ, ಅನಿತ ಮೂವರೂ ಪೈಪೋಟಿ ಮೇಲೆ ತವಕಿಸುತ್ತಿದ್ದರು. ಲತಾ, ಭಾಮ ಇನ್ನೂ ಚಿಕ್ಕವರಾಗಿದ್ದರಿಂದ ಅವರ ಹತ್ತಿರ ವೀರುವನ್ನು ಕೊಡುತ್ತಿರಲಿಲ್ಲ. ಹಂಗಾಗಿ ಶಾಂಭವಿಯ ಮೂವರು ಹೆಣ್ಣುಮಕ್ಕಳೇ ವೀರುವನ್ನು ನೋಡಿಕೊಳ್ಳುತ್ತಿದರು. ವಾರಿಜಳಿಗೂ ಮಗನನ್ನು ಮನೆಯ ಹೆಣ್ಣುಮಕ್ಕಳೇ ನೋಡಿಕೊಳ್ಳುತ್ತಿದ್ದರಿಂದ ಕೆಲಸ ಹಗುರವೆನಿಸಿ ನಿರಾಳವಾಗಿದ್ದಳು. ಬೇರೆ ಮನೆ ಅಂತ ಆಗಿದ್ದರೂ ವೀರೂವೇನು ಒಂದೇ ಕಡೆ ಇರುವವನೇ. ಅಲ್ಲಿಗಿಂತ ಇಲ್ಲಿಯೇ ಅವನಿಗೆ ಹೆಚ್ಚು ಹಿತ. ದೊಡ್ಡಪ್ಪನ ಪ್ರೀತಿ, ಮಮತೆ, ದೊಡ್ಡಮ್ಮನ ರುಚಿಯಾದ ಅಡುಗೆ, ಅಕ್ಕಂದಿರ ಪ್ರೀತಿಯ ಆರೈಕೆ ಇವು ಸದಾ ಬೇಕು ಅನ್ನೋ ರೀತಿಯಲ್ಲಿ ವೀರೂ ಬಯಸುತ್ತಿದ್ದ.

ಇಂದು ಆ ನೋವಿನಲ್ಲಿ ದೊಡ್ಡಪ್ಪನ ಮನೆಯ ಪ್ರೀತಿ, ಮಮತೆಯ ಆರೈಕೆಯ ಅಗತ್ಯ ಅವನಿಗೆ ಹೆಚ್ಚಾಗಿತ್ತು. ಅದಕ್ಕೆಂದೇ ವೀರೂ ದೊಡ್ಡಮ್ಮನನ್ನು ಅಂಟಿಕೊಂಡು ಬಿಟ್ಟಿದ್ದ, ಶಾಂಭವಿ ಕೂಡ ಅವನನ್ನು ಈ ಸ್ಥಿತಿಯಲ್ಲಿ ಕೆಳಗಿಳಿಸದೆ ಸಣ್ಣ ಮಗುವನ್ನು ಅಪ್ಪಿಕೊಂಡಂತೆ ಅಪ್ಪಿಕೊಂಡಿದ್ದಳು. ಅವನಿನ್ನೂ ಬಿಕ್ಕುತ್ತಲೇ ಇದ್ದ. ಅವನನ್ನು ಸಮಾಧಾನಿಸುತ್ತಾ, 'ವೀರೂ ಪುಟ್ಟುಗೆ ವೊಟ್ಟೆ ಅಸೀತಾ ಐತೆ ಅಲ್ವಾ... ನಿಂಗೇನು ಮಾಡ್ಕೊಡ್ಲಿ ಬಂಗಾರು' ಅಂತ ವೀರೂವನ್ನು ಮುದ್ದು ಮಾಡುತ್ತಾ ಕೇಳಿದಳು.

ವೀರೂ ಬಿಕ್ಕಳಿಸುತ್ತಲೇ 'ದೊಡ್ಡಮ್ಮ ನಂಗೇ ಕೇಸ್ರಿಬಾತು ಬೇಕು' ಅಂದ. ಹಾಗೆಂದ ಕೂಡಲೇ ಎಲ್ಲರೂ ಗೊಳ್ಳನೆ ನಕ್ಕುಬಿಟ್ಟರು. ಅವನು ಬೊಬ್ಬೆ ಬಂದ ನೋವನ್ನು ಮರೆತು ತನ್ನ ಮೆಚ್ಚಿನ ಕೇಸರಿಬಾತನ್ನು ಕೇಳಿದ್ದನ್ನು ನೋಡಿ ಅವರಿಗೆಲ್ಲಾ ನಗು ಬಂತು.

ಶಾಂಭವಿಗೂ ನಗು ಬಂದರೂ 'ಯಾಕ್ರೆ ಅಂಗೆ ನಗಾಡ್ತಿರಾ... ಅವನೇನು ನಗುವಂತದ್ದನ್ನು ಕೇಳಿದ್ನಾ? ಸುಮ್ಕಿರಿ ಸಾಕು. ಪಾಪ ಅವ್ನಿಗೆ ವೊಟ್ಟೆ ತುಂಬಾ ಅಸೀತಾ ಐತೆ ಅಲ್ವೇನೊ... ಅಂಗೆ ಮಕ್ಕಂಡಿರು, ಅಕ್ಕಾರು ಇಲ್ಲೆ ಇರ್ತಾರೆ, ಬೇಗ ಮಾಡ್ಕೊಂಡು ಬತ್ತೀನಿ' ಎಂದು ನಗುತ್ತಲೇ ಹೇಳಿ ಒಳನಡೆದಳು. ಸಂದರ್ಭ ಈಗ ಕೊಂಚ ತಿಳಿಯಾಯಿತು. ಅವನನ್ನು ನಗಿಸುತ್ತಾ ಆಟವಾಡಿಸುತ್ತಾ ಅವನ ನೋವನ್ನು ಮರೆಸಲೆತ್ನಿಸಿದರು.

ಶಾಂಭವಿ ಕೇಸರಿಬಾತು ಮಾಡಲು ಒಲೆ ಹತ್ತಿಸಿದಳು. ಆ ಮನೆಯಲ್ಲಿ ಅಲ್ಪ ಸ್ವಲ್ಪ ಮಾಡೋಕೆ ಆಗುತ್ತಾ... ಇಂಥ ವಿಶೇಷ ಅಡುಗೆ ಮಾಡುವಾಗ ಎರಡು ಮನೆಯನ್ನೂ ಗಮನದಲ್ಲಿಟ್ಟುಕೊಂಡೇ ಎರಡೂ ಮನೆಯವರೂ ಮಾಡುತ್ತಾರೆ. ಆ ಮನೆ ಈ ಮನೆ ಅನ್ನೋ ಭೇದವಿಲ್ಲದೆ ಮಕ್ಕಳು ಎರಡೂ ಮನೆಗೂ ಓಡಾಡಿಕೊಂಡು ಇರುವುದರಿಂದ ಎಲ್ಲಾ ಮಕ್ಕಳಿಗೂ ಸೇರಿಯೇ ವಿಶೇಷ ತಿನಿಸುಗಳನ್ನು ಮಾಡುತ್ತಿದ್ದರು. ಬರೀ ಮಕ್ಕಳಿಗೆ ಮಾಡಿದರೆ ಆಗುತ್ತದೆಯೇ, ದೊಡ್ಡವರಿಗೂ ಪಾಲು ಸಲ್ಲುತ್ತಿತ್ತು. ಶಾಂಭವಿ ರವೆಯನ್ನು ಘಂ ಎನ್ನುವಂತೆ ತುಪ್ಪದಲ್ಲಿ ಹುರಿದು ತೆಗೆದಿಟ್ಟು, ಗೋಡಂಬಿ ದ್ರಾಕ್ಷಿಯನ್ನು ತುಪ್ಪದಲ್ಲಿ ಹುರಿದಳು. ಮನೆಯಲ್ಲಿಯೇ ಕಾಸಿದ ತುಪ್ಪ ಘಮ ಘಮ ಎನ್ನುತ್ತಿತ್ತು. ಆ ಮನೆಯಲಿ ಹಾಲು ತುಪ್ಪಕ್ಕೇನೂ ಕೊರತೆ ಇರಲಿಲ್ಲ. ಮನೆಯಲ್ಲಿ ಯಾವಾಗಲು ಕರಾವು ಇದ್ದೇ ಇರುತ್ತಿತ್ತು. ಮನೆ ತುಂಬಾ ಮಕ್ಕಳು ಅಂತ ಹಾಲು ಕರೆಯುವ ಹಸುಗಳು ಸದಾ ಇರುವಂತೆ ಅಣ್ಣತಮ್ಮಂದಿರು ಸದಾ ನೋಡಿಕೊಳ್ಳುತ್ತಿದ್ದರು. ಮನೆಗೆ ಸಾಕಾಗುವಷ್ಟು ಹಾಲನ್ನು ಇಟ್ಟುಕೊಂಡು, ಉಳಿದದ್ದನ್ನು ಡೈರಿಗೆ ಹಾಕುತ್ತಿದ್ದರು. ಮಕ್ಕಳಿಗೆ ಕುಡಿಯುವಷ್ಟು ಹಾಲು, ಮೊಸರು, ತಿನ್ನುವಷ್ಟು ತುಪ್ಪಾ ಸದಾ ಮನೆಯಲ್ಲಿ ಇಟ್ಟುಕೊಂಡು ಯಾವಾಗಲೂ ಕೊರತೆಯಾಗದಂತೆ ಶಾಂಭವಿ ನೋಡಿಕೊಳ್ಳುತ್ತಿದ್ದಳು. ಜಾಸ್ತಿ ತುಪ್ಪ ಹಾಕಿ ತುತ್ತಿಗೊಂದು ಗೋಡಂಬಿ ದ್ರಾಕ್ಷಿ ಸಿಗುವಂತೆ ಹಾಕಿ, ಕೇಸರಿ ಬಣ್ಣ, ಸಕ್ಕರೆಯನ್ನು ಕುದಿಯುವ ನೀರಿಗೆ ಹಾಕಿ ಹುರಿದ ರವೆ ಸೇರಿಸಿ, ಕೊನೆಗೆ ಏಲಕ್ಕಿ ಪುಡಿ ಹಾಕಿದರೆ ರುಚಿ ರುಚಿಯಾದ ಕೇಸರಿಬಾತ್ ಸಿದ್ಧ. ಅಂತಹ ರುಚಿಯಾದ ಕೇಸರಿಬಾತನ್ನು ಮಕ್ಕಳಿಗಾಗಿ ಆಸ್ಥೆಯಿಂದ ತಯಾರಿಸಿದಳು. ಅದನ್ನು ತಟ್ಟೆಗಳಿಗೆ

